# ಕರ್ನಾಟಕ ವಿಧಾನ ಪರಿಷತ್ತು

| | |
|---|---|
| ಚುಕ್ಕೆಗುರುತಿಲ್ಲದ ಪ್ರಶ್ನೆ ಸಂಖ್ಯೆ | : 222 |
| ಸದಸ್ಯರ ಹೆಸರು | : ಶ್ರೀ ಎಸ್. ರವಿ<br>(ಸ್ಥಳೀಯ ಸಂಸ್ಥೆಗಳ ಕ್ಷೇತ್ರ) |
| ಉತ್ತರಿಸಬೇಕಾದ ಸಚಿವರು | : ಮಾನ್ಯ ಸಾರಿಗೆ ಮತ್ತು ಮುಜರಾಯಿ ಸಚಿವರು |
| ಉತ್ತರಿಸಬೇಕಾದ ದಿನಾಂಕ | : 13-08-2025 |

| | ಪ್ರಶ್ನೆ | ಉತ್ತರ |
|---|---|---|
| ಅ. | ರಾಜ್ಯದಲ್ಲಿ ಆಟೋ ಚಾಲಕರು ತಮ್ಮ ಆಟೋಗಳಲ್ಲಿ ಪ್ರಯಾಣಿಕರನ್ನು ಕರೆದೊಯ್ಯಲು ಅನುಸರಿಸಬೇಕಾದ ನಿಯಮಗಳನ್ನು ರೂಪಿಸಲಾಗಿದೆಯೇ; ರೂಪಿಸಿದ್ದಲ್ಲಿ, ಆ ನಿಯಮಗಳ ಕುರಿತು ಹೊರಡಿಸಿರುವ ಆದೇಶಗಳ ಪ್ರತಿಯನ್ನು ಒದಗಿಸುವುದು: | ಆಟೋ ಚಾಲಕರು ತಮ್ಮ ಆಟೋಗಳಲ್ಲಿ ಪ್ರಯಾಣಿಕರನ್ನು ಕರೆದೊಯ್ಯಲು ಅನುಸರಿಸಬೇಕಾದ ನಿಯಮಗಳನ್ನು ಕರ್ನಾಟಕ ಮೋಟಾರು ವಾಹನ ನಿಯಮಗಳು 1989ರ ನಿಯಮ 16 ರಲ್ಲಿ (Duties of drivers of motor-cabs & Auto rickshaw Cabs) ರೂಪಿಸಲಾಗಿದೆ. ಅಲ್ಲದೆ, ಪ್ರಾದೇಶಿಕ ಸಾರಿಗೆ ಪ್ರಾಧಿಕಾರಗಳು ಆಟೋರಿಕ್ಷಾ ರಹದಾರಿ ನೀಡಿಕೆ ಸಂದರ್ಭದಲ್ಲಿ ವಿಧಿಸಲಾಗುವ ಷರತ್ತುಗಳ ವಿವರಗಳನ್ನು ಪ್ರತ್ಯೇಕವಾಗಿ **ಅನುಬಂಧದ**ಲ್ಲಿ ಒದಗಿಸಲಾಗಿದೆ. |
| ಆ. | ಪ್ರಯಾಣಿಕರು ಹೇಳಿದ ಸ್ಥಳಕ್ಕೆ ಕರೆದೊಯ್ಯಲು ನಿರಾಕರಿಸಿರುವ ಆಟೋ ಚಾಲಕರ ವಿರುದ್ಧ ಪ್ರಯಾಣಿಕರಿಂದ ದೂರುಗಳು ದಾಖಲಾಗಿವೆಯೇ; ದಾಖಲಾಗಿದ್ದಲ್ಲಿ, ಕಳೆದ 03 ವರ್ಷಗಳಲ್ಲಿ ದಾಖಲಾಗಿರುವ ಪ್ರಕರಣಗಳೆಷ್ಟು; ಈ ಪ್ರಕರಣಗಳ ಸಂಬಂಧ ಕೈಗೊಂಡಿರುವ ಕ್ರಮಗಳೇನು? (ಸಂಪೂರ್ಣ ವಿವರ ನೀಡುವುದು) | ಸಾರಿಗೆ ಇಲಾಖೆಯಿಂದ ಕಳೆದ ಮೂರು ವರ್ಷಗಳಲ್ಲಿ ಹೇಳಿದ ಸ್ಥಳಕ್ಕೆ ಕರೆದೊಯ್ಯಲು ನಿರಾಕರಿಸಿರುವ ಆಟೋ ಚಾಲಕರ ವಿರುದ್ಧ ಒಟ್ಟು 11 ಪ್ರಕರಣಗಳನ್ನು ದಾಖಲಿಸಿದ್ದು ರೂ.50,000/- ಗಳ ದಂಡವನ್ನು ಸಂಗ್ರಹಿಸಲಾಗಿರುತ್ತದೆ.<br><br>ಪೊಲೀಸ್ ಇಲಾಖೆಯಿಂದ ರಾಜ್ಯದ ಎಲ್ಲಾ ಘಟಕಗಳಲ್ಲಿ ಆಟೋ ಚಾಲಕರ ವಿರುದ್ಧ ದಾಖಲಿಸಿದ ಪ್ರಕರಣಗಳ ವಿವರ ಈ ಕೆಳಕಂಡಂತಿರುತ್ತದೆ.<br><br>**ಕ್ರ. ಸಂ.** \| **ವರ್ಷ** \| **ಪ್ರಕರಣಗಳ ಸಂಖ್ಯೆ**<br>1 \| 2022 \| 2225<br>2 \| 2023 \| 1592<br>3 \| 2024 \| 3385<br>4 \| 2025 (ಜುಲೈ 31.07.2025 ರವರೆಗೆ) \| 2257<br><br>ಬೆಂಗಳೂರು ನಗರ ಸಂಚಾರ ವಿಭಾಗದಲ್ಲಿ ಆಟೋ ಚಾಲಕರುಗಳಿಂದ ಉಂಟಾಗುತ್ತಿರುವ ತೊಂದರೆಗಳನ್ನು ತಪ್ಪಿಸುವ ಸಲುವಾಗಿ ಹಾಗೂ ಸಾರ್ವಜನಿಕರು ಆಟೋ ಚಾಲಕರುಗಳ ಬಗ್ಗೆ ಸಂಚಾರ ಪೊಲೀಸರಿಗೆ ಮುಕ್ತವಾಗಿ ದೂರುಗಳನ್ನು ನೀಡಲು ಅನುಕೂಲ ಮಾಡಿಕೊಡುವ ಸಲುವಾಗಿ ಹೆಲ್ಪ್‌ಲೈನ್ ದೂರವಾಣಿ ಸಂಖ್ಯೆ: 22868550 / 22868444 ಗಳನ್ನು ಸೃಜಿಸಿ ಸಾರ್ವಜನಿಕರಿಗೆ ದೂರುಗಳನ್ನು ನೀಡಲು ಅವಕಾಶ ಕಲ್ಪಿಸಿಕೊಡಲಾಗಿರುತ್ತದೆ. ಈ ಸಹಾಯವಾಣಿ ಸಂಖ್ಯೆಗೆ ಸಾರ್ವಜನಿಕರಿಂದ ಬರುವ ದೂರುಗಳನ್ನು ಸ್ವೀಕರಿಸುವ ಸಲುವಾಗಿ 24x7 ಸಿಬ್ಬಂದಿಗಳನ್ನು ನಿಯೋಜಿಸಿ ದೂರುಗಳನ್ನು ಸ್ವೀಕರಿಸಲಾಗುತ್ತಿದೆ. ಕರೆದ ಕಡೆಗೆ ಬಾಡಿಗೆಗೆ ಹೋಗದೇ ಇರುವ ಹಾಗೂ ಬಾಡಿಗೆಗೆ |

| | ಪ್ರಶ್ನೆ | ಉತ್ತರ |
|---|---|---|
| | | ಹೋಗಲು ನಿರಾಕರಿಸುವ ಆಟೋ ಚಾಲಕರುಗಳ ವಿರುದ್ಧ ಸಹಾಯವಾಣಿಯ ಮುಖಾಂತರ 2023ನೇ ಸಾಲಿನಲ್ಲಿ 842, 2024ನೇ ಸಾಲಿನಲ್ಲಿ 367 ಹಾಗೂ 2025ನೇ ಸಾಲಿನಲ್ಲಿ ಈವರೆಗೆ ಒಟ್ಟು 157 ದೂರುಗಳನ್ನು ಸ್ವೀಕರಿಸಲಾಗಿರುತ್ತದೆ.<br><br>ರಾಜ್ಯದ ಎಲ್ಲಾ ಘಟಕಗಳಲ್ಲಿ ಆಟೋ ಚಾಲಕರು ಉಲ್ಲಂಘಿಸುವ ಸಂಚಾರ ನಿಯಮ ಉಲ್ಲಂಘನೆಗಳಿಗೆ ಐ.ಎಂ.ವಿ. ಕಾಯ್ದೆ ರೀತ್ಯಾ ಪ್ರಕರಣಗಳನ್ನು ದಾಖಲಿಸಲಾಗುತ್ತಿದೆ.<br><br>ಕರೆದ ಕಡೆಗೆ ಬಾಡಿಗೆ ಹೋಗಲು ನಿರಾಕರಿಸುವ ಹಾಗೂ ಹೆಚ್ಚಿನ ಬಾಡಿಗೆ ಸಂಗ್ರಹ ಮಾಡುವ ಆಟೋ ಚಾಲಕರುಗಳ ವಿರುದ್ಧ ಎಲ್ಲಾ ಘಟಕಗಳಲ್ಲಿ ವಿಶೇಷ ಕಾರ್ಯಾಚರಣೆಯನ್ನು ನಿರಂತರವಾಗಿ ಕೈಗೊಳ್ಳಲಾಗುತ್ತಿದೆ.<br><br>ಬೆಂಗಳೂರು ನಗರದ ಥಣಿಸಂದ್ರದಲ್ಲಿರುವ ಸಂಚಾರ ತರಬೇತಿ ಮತ್ತು ರಸ್ತೆ ಸುರಕ್ಷತಾ ಸಂಸ್ಥೆಯಲ್ಲಿ ಆಟೋ ಚಾಲಕರುಗಳಿಗೆ ತರಬೇತಿಯನ್ನು ಆಯೋಜಿಸಿ ತಿಳುವಳಿಕೆ ನೀಡಲಾಗುತ್ತಿದೆ.<br><br>ಬೆಂಗಳೂರು ನಗರದಲ್ಲಿ ಒಟ್ಟು 18 ಪ್ರಿಪೇಯ್ಡ್ ಆಟೋ ನಿಲ್ದಾಣಗಳು ಕಾರ್ಯನಿರ್ವಹಿಸುತ್ತಿದ್ದು, ಸಾರ್ವಜನಿಕರು ಅವುಗಳ ಸದುಪಯೋಗ ಪಡೆದುಕೊಳ್ಳಬಹುದಾಗಿರುತ್ತದೆ. |

**ಟಿಡಿ 55 ಟಿಡಿಕ್ಯೂ 2025**

(ರಾಮಲಿಂಗಾರೆಡ್ಡಿ)
ಸಾರಿಗೆ ಮತ್ತು ಮುಜರಾಯಿ ಸಚಿವರು

ಅನುಬಂಧ - 1

# CONDITION OF AUTORICKSHAW CAB PERMIT

Permit No————

Vehicle No————

1. That the vehicle relating to the permit shall be used only in the area/routes specified in the permit. BBMP limit
2. That no contract or hiring shall be entered in to by the Driver or permit holder outside the specified area or routes.
3. That no goods shall be carried the vehicle except passenger luggage, passenger effects of specified weight and passengers-luggage exceeds there for shall at the specified rate for such luggage as specified either inside the luggage –or outside luggage carriers.
4. That specified fares or fare shall be charged and a copy of the fare table approved by the –RTA shall be carried in /every vehicle and also made available for inspection by passengers if so required.
5. That passengers not more then be seating capacity assigned to both motor cab or auto rickshaw cab or specified in the permit relating to the vehicle shall be carried in the vehicle
6. That the motor cab/ auto rickshaw cab shall be fitted with the taxi meter or fare meter of the accredited type and approved by the RTA except otherwise exempted specifically and that such meter shall be maintainable in proper working order.
7. That detention charges shall be charged according to the rates prescribed for the specified period.
8. That conditions as laid down under.sec 84 of MV Act 1980 shall be strictly observed.
9. That the vehicles shall be parked at the stands approved by the RTA.
10. That no vehicles shall be replaced by any other vehicle except with permission of the RTA.
11. That no passengers, not included in the contract shall be picked up or set down along with the line/routes except those included in contract.
12. That the vehicle shall be kept ready always and make it available at Vidhana Soudha during office hours if specified agreed and undertakes in a condition precedent to grant of permit.
13. That by any reasons the driver, owner cause to drive the vehicle or the other removes from service of the present driver or paid drivers himself leaves his employment, the permit holder in all the aforesaid cases shall intimate the driver and particulars of licences and badge and his full name and address.
14. That the tax due in respect of the vehicle covered by the permit shall be paid accordance with the provisions of Karnataka Motor vehicle rules, and taxation Act and Rules.